ಶ್ರೀ ಸುಧೀಂದ್ರರಾವ್ ಕಸಬೆ.—ಇಲ್ಲಿ ಕೆಲವು ಧರ್ಮದರ್ಶಿ ಇಲಾಖೆ ನಿಯಂತ್ರಣದಲ್ಲಿ ಬರುತ್ತವೆ, ಮತ್ತೆ ಕೆಲವು ಕಡೆಗಳಲ್ಲಿ ಸ್ಥಳೀಯವಾಗಿ ೫೦ ಪರ್ಸೆಂಟ್ ಕಾಂಟ್ರಿಬ್ಯೂಷನ್ ಕೊಟ್ಟರೆ ಸರ್ಕಾರ ಇನ್ನೂಳಿದ ೫೦ ಪರ್ಸೆಂಟ್ ಕಾಂಟ್ರಿಬ್ಯೂಷನ್ ಕೊಟ್ಟು ಕಟ್ಟಿಸತಕ್ಕಂಥ ಕೆಲವು ಕಲ್ಯಾಣ ಮಂಟಪಗಳಿವೆ.

ಶ್ರೀ ಪ್ರಭಾಕರ್ ತೇಲ್ಕರ್.—ನನ್ನ ಜಿಲ್ಲೆಯಲ್ಲಿ ಸಾಕಷ್ಟು ಗುಡಿಗಳಿವೆ. ಮತ್ತು ಸಾಕಷ್ಟು ಮದುವೆಗಳು ಸಹ ಆಗುತ್ತಿವೆ. ಆದಕಾರಣ ಬೇರೆ ದೇವಾಲಯಗಳ ಹತ್ತಿರವೂ ಕಲ್ಯಾಣ ಮಂಟಪ ಗಳನ್ನು ಕಟ್ಟಿಸಲು ಸರ್ಕಾರ ಏರ್ಪಾಡು ಮಾಡುತ್ತದೆಯೇ?

ಶ್ರೀ ಸುಧೀಂದ್ರರಾವ್ ಕಸಬೆ.—ಮಾನ್ಯ ಅಧ್ಯಕ್ಷರೇ, ಬೇರೆ ದೇವಸ್ಥಾನಗಳ ಹತ್ತಿರ ಕಲ್ಯಾಣ ಮಂಟಪ ಕಟ್ಟಿಸಬೇಕೆಂದು ಅರ್ಜಿಗಳು ಬಂದರೆ, ಆ ಬಗ್ಗೆ ತಹಶೀಲ್ದಾರರಿಂದ ಅಲ್ಲಿ ಯಾವ ಪ್ರಮಾಣ ದಲ್ಲಿ ಮದುವೆಗಳು ಆಗುತ್ತಿವೆ ಎಂಬುದನ್ನು ಪರಿಶೀಲನೆ ಮಾಡಿಸಿ, ಅಗತ್ಯ ಕಂಡು ಬಂದರೆ ಕಲ್ಯಾಣ ಮಂಟಪ ಕಟ್ಟಿಸಲು ಅನುಮತಿ ಕೊಡುತ್ತೇವೆ.

ಶ್ರೀ ಪ್ರಭಾಕರ್ ತೇಲ್ಕರ್.—ಸ್ವಾಮಿ, ಈ ಮೂಲಕ ನಾನು ಸರ್ಕಾರಕ್ಕೆ ಬೇಡಿಕೊಳ್ಳುವು ದೇನೆಂದರೆ, ನಮ್ಮ ಗುಲ್ಬರ್ಗ ಜಿಲ್ಲೆಯಲ್ಲಿ ಸಾಕಷ್ಟು ಮಹತ್ವದಿಂದ ಕೂಡಿದ ಗುಡಿಗಳಿವೆ. ಈ ಗುಡಿಗಳಿಗೆ ಸೇರಿದ ಹಣ ಹಾಗೂ ಆಸ್ತಿಯನ್ನು ಕೆಲವರು ದುರುಪಯೋಗಪಡಿಸಿ ಕೊಳ್ಳುತ್ತಿರುವ ಕಾರಣ, ಅವು ಗಳನ್ನು ಸರ್ಕಾರದ ವಶಕ್ಕೆ ತೆಗೆದುಕೊಳ್ಳಲು ಸೂಕ್ತ ವ್ಯವಸ್ಥೆ ಮಾಡುತ್ತಾರೆಯೇ ಎಂದು?

ಶ್ರೀ ಸುಧೀಂದ್ರರಾವ್ ಕಸಬೆ.—ಮಾನ್ಯ ಸದಸ್ಯರು ಅಂತಹ ದೇವಸ್ಥಾನಗಳ ವಿವರಗಳನ್ನು ಸರ್ಕಾರಕ್ಕೆ ಕೊಟ್ಟರೆ, ನಾವು ಅದನ್ನು ಪರಿಶೀಲನೆ ಮಾಡಿ. ಸರ್ಕಾರದ ವಶಕ್ಕೆ ತೆಗೆದುಕೊಳ್ಳುತ್ತೇವೆ.

Land in Hosanagar Taluk

644. SRI SHEERNALY CHANDRASHEKAR (Hosanagar).—Will the Minister for Revenue and Agriculture be pleased to state;—

(a) whether the Government had issued an order to take back all the twenty to twenty-two thousand acres of land to Revenue Department from the Forest Department in Hosanagar Taluk which was handed over to the Forest Department from Revenue Depart ment and kept as propo ed Forest;

(b) if so the reasons why the order was not communicated to the concerned authorities at Hosanagar;

(c) whether the Government is aware that one or two hundred acres of land is in the available list in Hosanagar Taluk even though the darkast application are in thousands?

SRI S. BANGARAPPA.—(Minister for Revenue and Agriculture).—

(a) No.

(b) Does not arise in view of reply to (a) above.

(c) An extent of 340 acres 26 guntas of land as on 1-4-80 is available for disposal for agriculture purpose. There are 368 darkast application spending in Taluk Office, Hosanagar Taluk.

ಶ್ರೀ ಶೀರನಾಳಿ ಚಂದ್ರಶೇಖರ್.—ಸ್ವಾಮಿ, ಇಲ್ಲಿ ಕೊಟ್ಟಿರುವ ಉತ್ತರ ನೋಡಿ ನನಗೆ ಆಶ್ಚರ್ಯ ವಾಯಿತು. ಈ ಮೊದಲು ಶ್ರೀ ನಿಜಲಿಂಗಪ್ಪನವರು ಮುಖ್ಯಮಂತ್ರಿಯಾಗಿದ್ದಾಗ ೨೨ ಸಾವಿರ ಎಕರೆ ಪ್ರದೇಶವನ್ನು ಒಬ್ಬರು ತಹಶೀಲ್ದಾರರು ಅರಣ್ಯ ಇಲಾಖೆಗೆ ವಹಿಸಿಕೊಟ್ಟರು. ಇದರಿಂದ ೬-೮

ಸಾವಿರ ದರಖಾಸ್ತು ಅರ್ಜಿಗಳನ್ನು ರಿಜೆಕ್ಟ್ ಮಾಡಲಾಯಿತು. ಈ ವಿಚಾರದಲ್ಲಿ ನಾನು ಒಂದು ಗಮನ ಸೆಳೆಯುವ ಸೂಚನೆಯನ್ನು ಕಳುಹಿಸಿಕೊಟ್ಟೆ. ಅದಕ್ಕೆ ಮಾನ್ಯ ಹುಚ್ಚಮಾಸ್ತಿಗೌಡರು ಉತ್ತರ ಕೊಡುವ ಸಂದರ್ಭದಲ್ಲಿ ಈ ೨೨ ಸಾವಿರ ಎಕರೆ ಭೂಮಿಯನ್ನು ಮತ್ತೆ ಕಂದಾಯ ಇಲಾಖೆಗೆ ವಹಿಸಿಕೊಡುವಂತೆ ಅರಣ್ಯ ಇಲಾಖೆಗೆ ಆಜ್ಞೆ ಮಾಡಿದ್ದೇವೆಂದು ಹೇಳಿದರು. ಈ ಎಲ್ಲ ವಿವರಗಳನ್ನು ನಾನು ತೆಗೆಸುವುದಕ್ಕೆ ಮೊದಲೇ ಈ ಪ್ರಶ್ನೆಗೆ ಉತ್ತರ ಬಂದಿದೆ. ಆದ್ದರಿಂದ ನನ್ನ ಪ್ರಶ್ನೆ ಏನೆಂದರೆ, ಈ ಮೊದಲು ಕೊಟ್ಟ ಉತ್ತರಗಳನ್ನು ಪರಿಶೀಲನೆ ಮಾಡಿ ಇಲ್ಲಿ ಉತ್ತರ ಕೊಡಲಾಗಿದೆಯೇ ಹೇಗೆ ಎಂದು?

ಶ್ರೀ ಎಸ್. ಬಂಗಾರಪ್ಪ.—ನನ್ನ ಬಳಿ ಇರತಕ್ಕಂಥ ವಿವರಗಳ ಪ್ರಕಾರ ಅಂತಹ ಒಂದು ಆಜ್ಞೆಯನ್ನು ಮಾನ್ಯ ನಿಜಲಿಂಗಪ್ಪನವರು ಮಾಡಿದ್ದಾರೆಯೇ ಎಂಬುದು ನನಗೆ ಗೊತ್ತಿಲ್ಲ. ಆದರೆ ಹೊಸನಗರ ತಾಲ್ಲೂಕಿನಲ್ಲಿ ಸಾವಿರಾರು ಎಕರೆಯಷ್ಟು ಜಮೀನು ರೆವಿನ್ಯೂ ಇಲಾಖೆಯಿಂದ ಅರಣ್ಯ ಇಲಾಖೆಗೆ ವರ್ಗ ವಾಗಿರುವುದು ನಿಜ ಮತ್ತು ಅಲ್ಲಿನ ಅರಣ್ಯ ಇಲಾಖೆಯ ಜಮೀನಿನಲ್ಲಿ ಅನೇಕ ಜನರು ಬಗರ್–ಹುಕುಂ ಸಾಗುವಳಿ ಮಾಡಿರುವುದೂ ನಿಜ. ಈ ರೀತಿ ಅರಣ್ಯ ಇಲಾಖೆಗೆ ಸೇರಿದ ಜಮೀನಿನಲ್ಲಿ ಯಾರು ಯಾರು ಸಾಗುವಳಿ ಮಾಡಿಕೊಂಡು ಬಂದಿದ್ದರು. ಅಂತಹ ಜಮೀನನ್ನು ಲ್ಯಾಂಡ್–ಗ್ರಾಂಟ್ ರೂಲ್ಸ್ ಪ್ರಕಾರ ಅವರ ಹೆಸರಿಗೇ ಮಂಜೂರು ಮಾಡಬೇಕಾಗಿತ್ತು. ಇಂತಹ ಜಮೀನುಗಳನ್ನು ಅರಣ್ಯ ಇಲಾಖೆಗೆ ವಹಿಸಿ ಕೊಟ್ಟಿದ್ದು ಸರಿಯಲ್ಲ ಎಂಬ ಬಗ್ಗೆ ಸರ್ಕಾರಕ್ಕೆ ಪದೇಪದೇ ಮನವಿಗಳು ಬರುತ್ತಿವೆ. ಆದಕಾರಣ ಈ ರೀತಿ ಸಾಗುವಳಿ ಮಾಡಿರುವ ಭೂಮಿಯನ್ನು ಅವರಿಗೇ ಕೊಡಬೇಕೆಂಬುದನ್ನು ನಾವು ವಿಚಾರ ಮಾಡುತ್ತಿದ್ದೇವೆ. ಅರಣ್ಯ ಪ್ರದೇಶ ಕಡಿಮೆ ಇರುವುದರಿಂದ ಎಲ್ಲ ಅರಣ್ಯ ಪ್ರದೇಶವನ್ನೂ ಸಾಗುವಳಿಗೆ ಬಿಟ್ಟು ಕೊಡುವುದಕ್ಕಾಗುವುದಿಲ್ಲ. ಅರಣ್ಯವನ್ನು ಜಾಸ್ತಿ ಮಾಡಬೇಕಾಗುತ್ತದೆ. ಆದರೆ ಈಗಾಗಲೇ ಸಾಗುವಳಿ ಮಾಡಿರುವ ಬಡವರಿಗೆ ಯಾವ ರೀತಿ ಸಹಾಯ ಮಾಡಬೇಕೆಂಬುದನ್ನು ಸರ್ಕಾರ ಪರಿಶೀಲನೆ ಮಾಡುತ್ತಿದೆ.

ಶ್ರೀ ಶೀರನಾಳಿ ಚಂದ್ರಶೇಖರ್. ನಾನು ಶ್ರೀ ನಿಜಲಿಂಗಪ್ಪನವರ ಕಾಲದಲ್ಲಿ ಎಂದು ಹೇಳಲಿಲ್ಲ. ಶ್ರೀ ಹುಚ್ಚಮಾಸ್ತಿಗೌಡರು ಈ ಬಗ್ಗೆ ಈ ಸದನದಲ್ಲಿ ಹೇಳಿಕೆ ಕೊಟ್ಟಿರು ಎಂದು ನಾನು ಹೇಳಿದ್ದು. ಈ ಮೊದಲು ಅಲ್ಲಿ ಕಂದಾಯ ಇಲಾಖೆಗೆ ಸೇರಿದ ಭೂಮಿ ಇತ್ತು. ಆದರೆ ಹರಿಪರ ಪಾಲಿಫೈಬರ್ಸ್‌ನವರಿಗೆ ಬೇಕಾದ ನೀಲಗಿರಿ ಮರಗಳನ್ನು ಬೆಳೆಸಲು ಜಮೀನು ಕೊಡಬೇಕೆಂದು ಶ್ರೀ ವೀರೇಂದ್ರಪಾಟೀಲರ ಕಾಲದಲ್ಲಿ ಒಪ್ಪಂದವಾದಾಗ, ಅಲ್ಲಿನ ತಹಶೀಲ್‌ದಾರರು ಸರ್ಕಾರದಿಂದ ಶಹಭಾಸ್‌ಗಿರಿಯನ್ನು ಪಡೆದುಕೊಳ್ಳಲು ೨೨ ಸಾವಿರ ಎಕರೆ ಭೂಮಿಯನ್ನು ಅರಣ್ಯ ಇಲಾಖೆಗೆ ವಹಿಸಿಕೊಟ್ಟರು. ಇಂತಹ ಜಮೀನಿನಲ್ಲಿ ಕೆಲವರು ಸಾಗುವಳಿ ಮಾಡುತ್ತಿದ್ದರೂ ಸಹ. ಅವರಿಗೆ ಆ ಜಮೀನನ್ನು ಈ ಒಂದು ಕ್ರಮದಿಂದ ಬಿಟ್ಟುಕೊಡಲಂ ಸಾಧ್ಯವಾಗಲಿಲ್ಲ. ಆ ಸಂದರ್ಭದಲ್ಲಿ ನಾನು ಗಮನ ಸೆಳೆಯುವ ಸೂಚನೆ ಕಳುಹಿಸಿಕೊಟ್ಟಾಗ ಮಾನ್ಯ ಹುಚ್ಚಮಾಸ್ತಿಗೌಡರು ಈ ಜಮೀನನ್ನು ಅರಣ್ಯ ಇಲಾಖೆಯಿಂದ ವಾಪಸ್ ತೆಗೆದುಕೊಂಡಿದ್ದೇವೆಂದು ಉತ್ತರ ಕೊಟ್ಟರು. ಇದರ ಬಗ್ಗೆ ಮಾನ್ಯ ಮಂತ್ರಿಗಳು ವಿಚಾರ ಮಾಡಿದ್ದಾರೆಯೇ ಹೇಗೆ ಎಂದು ನಾನು ಈಗ ಕೇಳುತ್ತಿರುವುದು?

ಶ್ರೀ ಎಸ್. ಬಂಗಾರಪ್ಪ.—ಹಿಂದೆ ಮಾನ್ಯ ಹುಚ್ಚಮಾಸ್ತಿಗೌಡರು ಆ ರೀತಿ ಹೇಳಿಕೆ ಕೊಟ್ಟ ಮೇಲೆ, ಅದರ ಮೇಲೆ ಸರ್ಕಾರದ ಆಜ್ಞೆ ಹೊರಟಿದೆಯೋ ಅಥವಾ ಇಲ್ಲದೇ ಎಂಬುದನ್ನು ನಾನು ವಿಚಾರ ಮಾಡಿಸುತ್ತೇನೆ. ಒಂದು ವೇಳೆ ಸರ್ಕಾರದ ಆಜ್ಞೆ ಹೊರಡದಿದ್ದರೆ, ಅದು ಕೇವಲ ಹೇಳಿಕೆಯಾಗಿಯೇ ಉಳಿಯುತ್ತದೆ ಈಗ ಕೆಲವು ಪರತ್ತುಗಳಿಗೆ ಒಳಪಟ್ಟು ಅರಣ್ಯ ಭೂಮಿಯಲ್ಲಿ ಕೆಲವರು ಸಾಗುವಳಿ ಮಾಡುತ್ತಿದ್ದಾರೆ, ಮತ್ತೆ ಕೆಲವರು ಅರಣ್ಯದ ಮಧ್ಯ ಭಾಗದಲ್ಲಿ ಸಾಗುವಳಿ ಮಾಡುತ್ತಿದ್ದಾರೆ. ಇಂತಹ ವರಿಗೆ ಅರಣ್ಯದ ಮಧ್ಯ ಭಾಗದ ಜಮೀನನ್ನು ಖಾಯಂ ಮಾಡಿಕೊಟ್ಟರೆ, ಅಲ್ಲಿರುವ ನಾಟಾಗಳು ಅಲ್ಲಿಂದ ಹೊರಗಡೆಗೆ ಹೋಗಬಹುದೆಂಬ ಕಾರಣದಿಂದ ಅರಣ್ಯದ ತುದಿಯಲ್ಲಿರುವ ಜಾಗದಲ್ಲಿ ಇಲ್ಲವೇ 'ಬಿ' ಲೈನ್‌ನಲ್ಲಿ ಇಲ್ಲವೇ ಫೆರಿಫರಿ ಲೈನ್‌ನಲ್ಲಿರತಕ್ಕಂಥ ಜಮೀನುಗಳನ್ನು ಇವರಿಗೆ ವಂಜೂರು ಮಾಡ ಬೇಕೆಂದು ನಾವು ಆದೇಶ ಹೊರಡಿಸಿದ್ದೇವೆ. ಆದರೆ ಈಗಿರುವ ಪ್ರದೇಶಗಳನ್ನು ಬಿಟ್ಟು ನೂರಾರು ಮೈಲಿಗಳಷ್ಟು ದೂರದ ಜಾಗಗಳಿಗೆ ತಪುಗೆ ಹೋಗಲು ಆಗುವುದಿಲ್ಲ, ಆದಕಾರಣ ಈ ಒಂದು ಷರತ್ತುಗಳನ್ನು ತೆಗೆದುಹಾಕಿ ಎಂದು ಕೇಳುತ್ತಿದ್ದಾರೆ. ಶಿವಮೊಗ್ಗ, ಚಿಕ್ಕಮಗಳೂರು, ಕಾರವಾರ, ಕೂರ್ಗ್ ಈ ಎಲ್ಲ ಭಾಗಗಳಿಂದಲೂ ಸಹ ಸರ್ಕಾರಕ್ಕೆ ಮನವಿಗಳು ಬರುತ್ತಿವೆ. ಆದಕಾರಣ ಇಂತಹ ಜಮೀನುಗಳನ್ನು

ಅರಣ್ಯ ಇಲಾಖೆಯಿಂದ ರೆವಿನ್ಯೂ ಇಲಾಖೆಗೆ ತೆಗೆದುಕೊಂಡು, ಅವರಿಗೇ ಖಾಯಂ ಮಾಡುವ ಬಗ್ಗೆ ಸರ್ಕಾರ ಪರಿಶೀಲನೆ ಮಾಡುತ್ತಿದೆ. ಆದರೆ ಜಮೀನು ಇರುವವರು ಏನಾದರು ಅರಣ್ಯದ ಜಮೀನನ್ನು ಅಕ್ರಮವಾಗಿ ಸಾಗುವಳಿ ಮಾಡಿದ್ದರೆ, ಅಂತಹವರನ್ನು ಅಲ್ಲಿಂದ ಉಚ್ಚಾಟನೆ ಮಾಡುತ್ತೇವೆ.

ಶ್ರೀ ಶೀರನಾಳಿ ಚಂದ್ರಶೇಖರ್.—ಈಗ ಒಂದು ಸಮಸ್ಯೆ ಆಷ್ಟೇನೂ ಜಟಿಲವಾಗಿಲ್ಲ. ಹೆಣ್ಣೂ ಅಲ್ಲ, ಗಂಡೂ ಅಲ್ಲ, ಶಿಖಂಡಿ ಎಂಬಂತೆ, ಈ ಜಮೀನು ಅರಣ್ಯ ಇಲಾಖೆಗೂ ಸೇರಿಲ್ಲ ರೆವಿನ್ಯೂ ಇಲಾಖೆಗೂ ಸೇರಿಲ್ಲ, ಮಧ್ಯವರ್ತಿಯಾಗಿದೆ. ಈ ಜಮೀನಿನಲ್ಲಿ ಅನೇಕ ರೈತರು ಅನೇಕ ವರ್ಷಗಳಿಂದ ಸಾಗುವಳಿ ಮಾಡಿಕೊಂಡು ಬಂದಿದ್ದಾರೆ. ಇದನ್ನೆಲ್ಲಾ ಪರಿಶೀಲನೆ ಮಾಡದೆ ಅರಣ್ಯ ಇಲಾಖೆಯವರು ವಹಿಸಿಕೊಂಡಿದ್ದಾರೆ. ಇದರಿಂದ ಯಾರು ಯಾರು ವಂಶಪಾರಂಪರ್ಯವಾಗಿ ಅನುಭವಿಸಿಕೊಂಡು ಬಂದಿದ್ದರು ಅಂತಹವರಿಗೆ ಅದನ್ನು ಅನುಭವಿಸುವ ಹಕ್ಕನ್ನು ಕೊಡುವುದಕ್ಕೆ ಸಾಧ್ಯವಾಗಿಲ್ಲ. ಇಂತಹ ೮-೧೦ ಸಾವಿರ ಕುಟುಂಬಗಳಿವೆ. ಆದಕಾರಣ ಈ ಜಮೀನನ್ನು ತಕ್ಷಣಾ ರೆವಿನ್ಯೂ ಇಲಾಖೆಗೆ ತೆಗೆದುಕೊಂಡು, ಒಂದು ಅಂತಿಮ ತೀರ್ಮಾನ ಕೈಗೊಳ್ಳುತ್ತಾರೆಯೇ ಹೇಗೆ?

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸದಸ್ಯರು ಹೇಳಿದಂತೆ ಸಾವಿರಾರು ಕುಟುಂಬಗಳು ಈ ರೀತಿಯಿಂದ ಜೀವನ ಮಾಡುತ್ತಿದ್ದಾರೆ. ಕೇವಲ ಹೊಸನಗರ ತಾಲ್ಲೂಕ್ ಮಾತ್ರವಲ್ಲ, ಬೇರೆ ತಾಲ್ಲೂಕು ಗಳಲ್ಲಿಯೂ ಇದೇ ರೀತಿ ಜೀವನ ಮಾಡುತ್ತಿದ್ದಾರೆ. ಇದನ್ನು ನಾನು ಒಪ್ಪಿದ್ದೇನೆ. ಈ ಜನರ ಬಗ್ಗೆ ನನಗೆ ಸಹಾನುಭೂತಿ ಇದೆ. ಆದಕಾರಣ ಶೀಘ್ರದಲ್ಲಿಯೇ ಈ ವಿಚಾರದಲ್ಲಿ ನಾವು ಒಂದು ಅಂತಿಮ ತೀರ್ಮಾನವನ್ನು ಕೈಗೊಳ್ಳುತ್ತೇವೆ.

Grant of Land to a nonresident at Maradi Village. Arkalgud.

726 SRI K. B. MALLAPPA (Arkalgud). -Will the Minister for Revenue and Agriculture be pleased to state.—

(a) whether land in S.No. 40 which is tank of Maradi Village Arkalgud is granted to one Sri P.R. Lakshminarayana S/o Sri P. S. Ramaswamy of Pannathapur, Alur Taluk Hassan District who is not resident of Pannathapur.

(b) whether it is a fact that the grantee is in USA on employment;

(c) The date on which the grantee has left the State for USA ;

(d) The number of acres of land in S.No. 40 of Maradi Village ;

(e) The date on which the tank was released for grant ;

(f) The name of the persons to whom the grant was made out of S.N. 40?

SRI S. BANGARAPPA (Minister for Revenue and Agriculture).—

(a) No. but land was granted to one Sri P. R. Lakshminarayan Ramaswamaiah who was a resident of Ponnathapura Village prio ts submergence.

(b) No.

(c) Does not arise in view of answers to a & b Supra.